# “ಗೇರು ಕೃಷಿಯಲ್ಲಿ ಪೋಷಕಾಂಶ ನಿರ್ವಹಣೆ” ಮೊಬೈಲ್ ಆ್ಯಪ್‌ನ ಬಳಕೆಯ ಮಾಹಿತಿ

# Customerised Instruction Material on the use of mobile App “Cashew Nutrient Manager”


**ಭಾ.ಕೃ.ಸಂ.ಪ. - ಗೇರು ಸಂಶೋಧನಾ ನಿರ್ದೇಶನಾಲಯ**

ಪುತ್ತೂರು - 574 202, ಕರ್ನಾಟಕ, ಭಾರತ

**भा.कृ.अनु.प. – काजू अनुसंधान निदेशालय**

पुत्तूर – 574 202, कर्नाटक, भारत

**ICAR-DIRECTORATE OF CASHEW RESEARCH**

Puttur - 574 202, Karnataka, India

## ಮುನ್ನುಡಿ:

ಗೇರು ಕೃಷಿಕರು ಗಿಡಗಳ ಪೋಷಕಾಂಶ ನಿರ್ವಹಣೆಯ ಬಗ್ಗೆ ನಿರ್ಲಕ್ಷ್ಯ ತೋರುವುದರಿಂದ ಗೇರು ಬೀಜ ಇಳುವರಿಯು ಕುಂಠಿತವಾಗುತ್ತದೆ. ಸರಿಯಾದ ಸಮಯದಲ್ಲಿ ಗಿಡಗಳಿಗೆ ಸಮ ಪ್ರಮಾಣದ ರಸಗೊಬ್ಬರವನ್ನು ನೀಡುವುದರಿಂದ ಗಿಡಗಳು ಚೆನ್ನಾಗಿ ಬೆಳವಣಿಗೆಯಾಗಿ ಹೆಚ್ಚಿನ ಲಾಭ ಪಡೆಯಬಹುದು. ಗೇರು ಕೃಷಿಯಲ್ಲಿ ಪರಿಣಾಮಕಾರಿಯಾಗಿ ರಸಗೊಬ್ಬರದ ನಿರ್ವಹಣೆಯನ್ನು ಮಾಡಲು ಆರ್.ಕೆ.ವಿ.ವೈ - ರಫ್ತಾರ್ ಯೋಜನೆಯ ನೆರವಿನಿಂದ ಈ ಆ್ಯಪ್‌ನ್ನು ಅಭಿವೃದ್ಧಿಪಡಿಸಲಾಗಿದೆ. ಗೂಗಲ್ ಪ್ಲೇ ಸ್ಟೋರಿನಲ್ಲಿ ಲಭ್ಯವಿರುವ ಈ ಆ್ಯಪ್‌ನಿಂದ ಗೇರು ಗಿಡಗಳಿಗೆ ಹಾಕಬೇಕಾಗಿರುವ ರಸಗೊಬ್ಬರದ ಪ್ರಮಾಣ, ಸುಣ್ಣದ ಪ್ರಮಾಣ, ಎಲೆಗಳ ಮೇಲೆ ಸಿಂಪಡಿಸುವ ಪೋಷಕಾಂಶಗಳ ಪ್ರಮಾಣ ಮತ್ತು ಲಘು ಪೋಷಕಾಂಶಗಳ ಪ್ರಮಾಣ ತಿಳಿಯಬಹುದು. ಪೋಷಕಾಂಶಗಳ ಕೊರತೆಯಿಂದ ಗೇರು ಗಿಡಗಳಲ್ಲಿ ಕಂಡು ಬರುವ ಗುಣಲಕ್ಷಣಗಳನ್ನು ಈ ಆ್ಯಪ್‌ನಲ್ಲಿ ನೀಡಲಾಗಿದೆ. ಕೃಷಿಕರು ಆ್ಯಪ್‌ನಲ್ಲಿರುವ ಚಿತ್ರಗಳನ್ನು ಕ್ಲಿಕ್ ಮಾಡುವ ಮೂಲಕ ಪೋಷಕಾಂಶಗಳ ಕೊರತೆಯನ್ನು ತಿಳಿದುಕೊಂಡು ಕೊರತೆಯನ್ನು ಸರಿಪಡಿಸುವ ಕ್ರಮಗಳನ್ನು ತಿಳಿಯಬಹುದು. ಈ ಆ್ಯಪ್‌ನಿಂದ ಭಾ.ಕೃ.ಸಂ.ಪ. - ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು ಕೃಷಿಕರಿಗೆ ನೀಡಿರುವ ಮಣ್ಣಿನ ಆರೋಗ್ಯ ಕಾರ್ಡ್‌ನ್ನು ಡೌನ್‌ಲೋಡ್ ಮಾಡಬಹುದಾಗಿದೆ. ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬಳಸಬಹುದಾದ ಈ ಆ್ಯಪ್‌ನ್ನು ಗೂಗಲ್ ಪ್ಲೇ ಸ್ಟೋರಿನಿಂದ ಡೌನ್‌ಲೋಡ್ ಮಾಡಬಹುದಾಗಿದೆ.

https://play.google.com/store/apps/details?id=com.icarcashew.dcr_cashewnutrientmanager.


ಈ ಮೊಬೈಲ್ ಆ್ಯಪ್‌ನ್ನು ಪರಿಣಾಮಕಾರಿಯಾಗಿ ಉಪಯೋಗಿಸಲು ಈ ಮಾಹಿತಿಯನ್ನು ನೀಡಲಾಗಿದೆ.


# “ಗೇರು ಕೃಷಿಯಲ್ಲಿ ಪೋಷಕಾಂಶ ನಿರ್ವಹಣೆ” ಮೊಬೈಲ್ ಆ್ಯಪ್‌ನ್ನು ಡೌನ್‌ಲೋಡ್ ಮಾಡುವ ವಿಧಾನ

ಗೂಗಲ್ ಪ್ಲೇ ಸ್ಟೋರಿನಲ್ಲಿ ಈ ಕೆಳಗೆ ತೋರಿಸಿರುವಂತೆ ಹುಡುಕಬೇಕು (Cashew Nutrient Manager),


ಅಥವಾ ಈ ಲಿಂಕ್‌ನ್ನು ಉಪಯೋಗಿಸಿ


https://play.google.com/store/apps/details?id=com.icarcashew.dcr_cashewnutrientmanager




## ಮೊಬೈಲ್ ಆ್ಯಪ್‌ನ ಅವಲೋಕನ




## ಗೇರು ಕೃಷಿಯಲ್ಲಿ ಪೋಷಕಾಂಶ ನಿರ್ವಹಣೆ ಆ್ಯಪ್‌ನಲ್ಲಿರುವ ಆಯ್ಕೆಗಳು


ಈ ಆ್ಯಪ್‌ನಿಂದ ಕೆಳಗಿನ ಲೆಕ್ಕಾಚಾರಗಳನ್ನು ಮಾಡಬಹುದು.

- ✓ ಕೃಷಿಕರ ತೋಟಗಳ ಅವಶ್ಯಕತೆಗೆ ಅನುಸಾರವಾಗಿ ಬೇಕಾಗಿರುವ ರಸಗೊಬ್ಬರದ ಪ್ರಮಾಣವನ್ನು ತಿಳಿಸುತ್ತದೆ.
- ✓ ಮಣ್ಣಿನ ಪರೀಕ್ಷೆ ವರದಿಯಂತೆ ತೋಟಕ್ಕೆ ಹಾಕ ಬೇಕಾಗಿರುವ ಸುಣ್ಣದ ಪ್ರಮಾಣವನ್ನು ತಿಳಿಸುತ್ತದೆ.
- ✓ ಎಲೆಗಳ ಮೇಲೆ ಸಿಂಪಡಿಸಲು ಬೇಕಾಗುವ ಮುಖ್ಯ ಮತ್ತು ಲಘು ಪೋಷಕಾಂಶಗಳ ಪ್ರಮಾಣ ತಿಳಿಸುತ್ತದೆ.
- ✓ ಗೇರು ಮರಗಳಲ್ಲಿ ಕಂಡುಬರುವ ಪೋಷಕಾಂಶಗಳ ಕೊರತೆ ಮತ್ತು ನಿರ್ವಹಣಾ ಕ್ರಮಗಳನ್ನು ತಿಳಿಸುತ್ತದೆ.
- ✓ ಕೃಷಿಕರು ಮಣ್ಣು ಪರೀಕ್ಷೆಯನ್ನು ಗೇರು ಸಂಶೋಧನಾ ನಿರ್ದೇಶನಾಲಯ ಪುತ್ತೂರಿನಲ್ಲಿ ಮಾಡಿಸಿದ್ದಲ್ಲಿ ಈ ಆ್ಯಪ್‌ನ ಮೂಲಕ ಮಣ್ಣಿನ ಆರೋಗ್ಯ ಕಾರ್ಡ್‌ನ್ನು ಡೌನ್‌ಲೋಡ್ ಮಾಡಬಹುದಾಗಿದೆ.
- ✓ ಕೆಲವು ಉಪಯುಕ್ತ ಪರಿವರ್ತಕಗಳು.

# ರಸಗೊಬ್ಬರ ಪ್ರಮಾಣವನ್ನು ಲೆಕ್ಕ ಮಾಡುವ ಮಾರ್ಗಸೂಚಿಗಳು


- ✓ ಗೇರು ಗಿಡಗಳಿಗೆ ಹಾಕಬೇಕಾಗಿರುವ ರಸಗೊಬ್ಬರ ಪ್ರಮಾಣವನ್ನು ತಿಳಿಯಲು ಕೃಷಿಕರು ತಮ್ಮ ತೋಟದಲ್ಲಿರುವ ಗೇರು ಗಿಡಗಳ ಸಂಖ್ಯೆ ನಮೂದಿಸಬೇಕು ಅಥವಾ ಗೇರು ಗಿಡಗಳನ್ನು ನಾಟಿ ಮಾಡಿರುವ ಅಂತರ ಮತ್ತು ಜಾಗದ ವಿಸ್ತೀರ್ಣವನ್ನು ನಮೂದಿಸಬೇಕು.
- ✓ ಐದು ವರ್ಷಗಳಿಗಿಂತ ಮೇಲ್ಪಟ್ಟ ತೋಟ ವಿದ್ದರೆ ವಯಸ್ಸನ್ನು ಐದು ಎಂದು ನಮೂದಿಸಬೇಕು. ಮೊದಲ ಐದು ವರ್ಷಗಳ ಗಿಡಗಳ ತೋಟವಿದ್ದರೆ, ಆ ಗಿಡಗಳ ವಯಸ್ಸನ್ನು ನಮೂದಿಸಬೇಕು.
- ✓ ಕೃಷಿಕರು ಅಧಿಕ ಸಾಂದ್ರ ಪದ್ಧತಿಯಂತೆ (High Density Planting) ಗೇರು ಗಿಡಗಳನ್ನು ನಾಟಿ ಮಾಡಿದ್ದರೆ ಪ್ರತ್ಯೇಕವಾಗಿ ರಸಗೊಬ್ಬರ ಪ್ರಮಾಣವನ್ನು ಲೆಕ್ಕ ಮಾಡುವ ಆಯ್ಕೆಯಿದೆ.
- ✓ ಕೃಷಿಕರು ತಮ್ಮ ತೋಟದ ಮಣ್ಣಿನ ಪರೀಕ್ಷೆ ಮಾಡಿಸಿದ್ದಲ್ಲಿ, ಫಲಿತಾಂಶವನ್ನು ನಮೂದಿಸಿ ಗಿಡಗಳಿಗೆ ಹಾಕಬೇಕಾಗಿರುವ ರಸಗೊಬ್ಬರದ ಪ್ರಮಾಣವನ್ನು ತಿಳಿಯಬಹುದು.

- ✓ ಕೃಷಿಕರು ತಮ್ಮ ತೋಟಕ್ಕೆ ಹಾಕಲು ಶಿಫಾರಸು ಮಾಡಿರುವ ಪೋಷಕಾಂಶದ ಪ್ರಮಾಣವನ್ನು ಕೆಳಗೆ ನೀಡಿರುವ ಪಟ್ಟಿಯಿಂದ ಆಯ್ಕೆ ಮಾಡಬೇಕು.
- ✓ ಕೃಷಿಕರು ತಮ್ಮ ಆಯ್ಕೆಯ ರಸಗೊಬ್ಬರವನ್ನು ಆಯ್ದುಕೊಳ್ಳಬಹುದು ಅಥವಾ ಆಯ್ಕೆಯಲ್ಲಿಲ್ಲದ ಹೊಸ ರಸಗೊಬ್ಬರವನ್ನು ಬಳಸಿದ್ದಲ್ಲಿ ಅದರ ಚೀಲದ ಮೇಲೆ ನೀಡಿರುವ ಶೇಕಡವಾರು ರಸಗೊಬ್ಬರಗಳ ಅಂಶವನ್ನು ನಮೂದಿಸಬೇಕು.
- ✓ ಕೃಷಿಕರು ಪ್ರತಿ ಗಿಡಕ್ಕೆ ಹಾಕಬೇಕಾಗಿರುವ ರಸಗೊಬ್ಬರ ಪ್ರಮಾಣ ಮತ್ತು ತೋಟಕ್ಕೆ ಬೇಕಾಗುವ ರಸಗೊಬ್ಬರ ಪ್ರಮಾಣದ ವರದಿಯನ್ನು ಪಡೆಯಬಹುದು.




## 2. ಸುಣ್ಣದ ಪ್ರಮಾಣ ಲೆಕ್ಕ ಮಾಡುವ ವಿಧಾನ

- ✦ ಮಣ್ಣಿನ ಪರೀಕ್ಷೆಯನ್ನು ಮಾಡಿಸಿ ತೋಟದ ಮಣ್ಣಿನ ರಸಸಾರ (ಪಿ.ಎಚ್.) ನಮೂದಿಸಬೇಕು.
- ✦ ಮರ ಹರಡಿರುವ ವಿಸ್ತೀರ್ಣದ ಅಳತೆ, ಬಳಸುವ ಸುಣ್ಣದ ವಿಧ ಮತ್ತು ನಿರ್ದಿಷ್ಟ ವಿಸ್ತೀರ್ಣದಲ್ಲಿರುವ ಗಿಡಗಳ ಸಂಖ್ಯೆ ಅಥವಾ ಗಿಡಗಳ ನಡುವಿನ ಅಂತರವನ್ನು ನಮೂದಿಸಬೇಕು.





## 3. ಎಲೆಗಳ ಮೇಲೆ ಸಿಂಪಡಿಸುವ ಪೋಷಕಾಂಶಗಳ ಪ್ರಮಾಣ ಲೆಕ್ಕ ಮಾಡುವ ವಿಧಾನ

- ✓ ಸಿಂಪರಣೆಗೆ ಬಳಸುವ ರಸಗೊಬ್ಬರವನ್ನು ಆಯ್ಕೆ ಮಾಡಬೇಕು.
- ✓ ತೋಟದಲ್ಲಿರುವ ಗಿಡಗಳ ಸಂಖ್ಯೆ ಮತ್ತು ತೋಟದ ವಿಸ್ತೀರ್ಣವನ್ನು ನಮೂದಿಸಬೇಕು.
- ✓ ಗಿಡದ ವಯಸ್ಸು ಮತ್ತು ಗೊಬ್ಬರವನ್ನು ಮಿಶ್ರಣ ಮಾಡಲು ಬಳಸುವ ಟ್ಯಾಂಕ್‌ನ ಸಾಮರ್ಥ್ಯ ನಮೂದಿಸಬೇಕು.




## 4. ಮಣ್ಣಿನ ಆರೋಗ್ಯ ಕಾರ್ಡ್‌ನ್ನು ಡೌನ್‌ಲೋಡ್ ಮಾಡುವ ವಿಧಾನ

✓ ಈ ಸೌಲಭ್ಯವನ್ನು ಭಾ. ಕೃ. ಸಂ. ಪ. - ಗೇರು ಸಂಶೋಧನಾ ನಿರ್ದೇಶನಾಲಯ ಪುತ್ತೂರಿನಲ್ಲಿ ಮಣ್ಣು ಪರೀಕ್ಷೆ ಮಾಡಿಸಿರುವ ಕೃಷಿಕರು ಮಣ್ಣಿನ ಪರೀಕ್ಷೆ ಮಾಡಿರುವ ವರ್ಷ ಮತ್ತು ಆಧಾರ್ ಸಂಖ್ಯೆಯನ್ನು ನಮೂದಿಸಿ ಮಣ್ಣಿನ ಆರೋಗ್ಯ ಕಾರ್ಡ್‌ನ್ನು ಪಡೆಯಬಹುದಾಗಿದೆ.




## 5. ಇತರೆ ಆಯ್ಕೆಗಳು

✓ ಕೃಷಿಕರು ಗೇರು ಮರದಲ್ಲಿ ಕಂಡು ಬರುವ ಪೋಷಕಾಂಶಗಳ ಕೊರತೆಯ ಲಕ್ಷಣಗಳ ಬಗ್ಗೆ ಮಾಹಿತಿ ಮತ್ತು ಅವುಗಳ ನಿರ್ವಹಣಾ ಕ್ರಮಗಳನ್ನು ತಿಳಿಯಬಹುದು.



## ಗೇರು ಕೃಷಿಯಲ್ಲಿ ಪೋಷಕಾಂಶ ನಿರ್ವಹಣೆ ಮೊಬೈಲ್ ಆ್ಯಪ್‌ನ ಬಳಕೆಯ ಮಾಹಿತಿ, No. 02/2020


| | | |
|---|---|---|
| ಲೇಖಕರು | : | ಸಂದೇಶ್ ಎಂ.ಎಸ್., ಸಿದ್ದಣ್ಣ ಸವದಿ, ಮುರಳಿಧರ ಬಿ.ಎಮ್., ಶಂಸುದ್ಧೀನ್ ಮಂಗಳಸ್ಸೆರಿ ಮತ್ತು ಪ್ರೀತಿ ಪಿ. |
| ಪ್ರಕಾಶಕರು | : | ಡಾ. ಎಮ್.ಜಿ. ನಾಯಕ್, ನಿರ್ದೇಶಕರು, ಭಾ.ಕೃ.ಸಂ.ಪ. - ಗೇರು ಸಂಶೋಧನಾ ನಿರ್ದೇಶನಾಲಯ, ಪುತ್ತೂರು, ದ.ಕ., ಕರ್ನಾಟಕ |
| ದೂರವಾಣಿ ಸಂಖ್ಯೆ | : | 08251-230902, ಫ್ಯಾಕ್ಸ್ : 08251 - 234350 |
| ಈ-ಮೇಲ್ | : | director.dcr@icar.gov.in |
| ವೆಬ್‌ಸೈಟ್ | : | https://cashew.icar.gov.in |
| ಮುದ್ರಣ | : | 01 ಫೆಬ್ರವರಿ, 2020 |